ಓ ಎಸ್ ನಂ.53/2023
ಡಿ.ಡಬ್ಲ್ಯೂ-1 ರವೀಂದ್ರ ತಂದೆ ಸಾತಲಿಂಗಪ್ಪ

(ಇಂದು ದಿನಾಂಕಃ **21-07-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

<u>ಮುಂದುವರೆದ ಪಾಟೀ ಸವಾಲುಃ 2ನೇ ಪ್ರತಿವಾದಿ ಪರ ಶ್ರೀ ಸಿ. ಎಸ್. ಹೆಚ್. ವಕೀಲರಿಂದ.</u>

ನನ್ನ ಮುಖ್ಯ ವಿಚಾರಣೆಯಲ್ಲಿ ನಮ್ಮ ತಂದೆ ಆಸ್ಪತ್ರೆ ಖರ್ಚು ರೂ.18,00,000/- ಆಗಿರುತ್ತದೆ ಎಂದು ತಿಳಿಸಿರುತ್ತೇನೆ. ನನ್ನ ತಂದೆಯ ಕಾಲಿನ ಆಪರೇಷನ ವಾದಿ ಮಾಡಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ನಮ್ಮ ತಂದೆಯ ಕಾಲಿನ ಆಪರೇಷನ ಆಗೆ ಇರುವುದಿಲ್ಲ ಎನ್ನುತ್ತಾರೆ. ನಮ್ಮ ತಂದೆಯ ಆಸ್ಪತ್ರೆಯ ಖರ್ಚನ್ನು ವಾದಿ ಮತ್ತು 2ನೇ ಪ್ರತಿವಾದಿ ಕೂಡಾ ಭರಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ವಾದಿ ಮತ್ತು 2ನೇ ಪ್ರತಿವಾದಿ ಮನೆಗೆ ಕೂಡಾ ಹೋಗಿ ಬಂದು ಮಾಡುತ್ತಿದ್ದರು ಎಂದರೆ ಸಾಕ್ಷಿ ಈಗ 15 ವರ್ಷಗಳ ಹಿಂದೆ ಹೋಗಿ ಬಂದು ಮಾಡುತ್ತಿದ್ದರು ಎನ್ನುತ್ತಾರೆ. ಈಗ ನಮ್ಮ ತಂದೆಗೆ ವಯಸ್ಸಾಗಿರುವುದರಿಂದ ಈಗ ಹೋಗಿ ಬಂದು ಮಾಡುತ್ತಿಲ್ಲ ಮತ್ತು ಅವರ ಅವರಿಗೆ ಖರ್ಚಿಗೆ ಹಣವನ್ನು ವಾದಿ ಮತ್ತು 2ನೇ ಪ್ರತಿವಾದಿ ಕೂಡಾ ನೀಡುತ್ತಿರುತ್ತಾರೆ ಎಂದರೆ ಸರಿಯಲ್ಲ. ನಾನು ಕಲಬುರಗಿಯಲ್ಲಿ ವಾಸ ಇರುತ್ತೇನೆ ಎಂದರೆ ಸರಿ.

2. ದಾವಾ ಆಸ್ತಿಗಳಲ್ಲಿ ನಮ್ಮ ನಡುವೆ ಯಾವುದೇ ಪಾಲು ಆಗಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಗೆ ವಯಸ್ಸಾಗಿದ್ದರಿಂದ ಅವರ ಎಲ್ಲ ಆಸ್ತಿ ಹೊಡೆಯುವ ಉದ್ದೇಶದಿಂದ

ಯಾವುದೇ ಪಾಲು ಆಗದೇ ಇದ್ದರೂ ಪಾಲು ಆಗಿದೆ ಎಂದು ಸುಳ್ಳು ಪ್ರತಿವಾದ ಪತ್ರ ಮತ್ತು ಸುಳ್ಳು ಮುಖ್ಯ ವಿಚಾರಣೆ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.